## ಅಡಿಕೆಯಲ್ಲ, ಇದು ರಾಯಲ್ ಪಾಮ್



ಈಚೆಗೆ ಬೀದರ್ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಗಳಲ್ಲಿ ಒಂದಾಗಿರುವ 'ಗುರು ನಾನಕ್ ಝಿರಾ ಸಾಹಿಬ್ ಗುರುದ್ವಾರ'ದ ಉದ್ಯಾನವನದಲ್ಲಿ ವಿಹರಿಸುತ್ತಿದ್ದಾಗ ಕೆಂಬಣ್ಣದ ಈ ಆಕರ್ಷಕ ಹಣ್ಣುಗಳ ಗೊಂಚಲುಗಳನ್ನು ಕಂಡು ಕರಾವಳಿಯ ಅಡಿಕೆ ತೋಟದಲ್ಲಿರುವೆನೇನೋ ಎಂದು ಭಾಸವಾಯಿತು. ಹೂವಿನ ಹಾಳೆಯೂ ಅಡಿಕೆಯ ಹಿಂಗಾರದಂತಿತ್ತು. ಆದರೆ ಅಡಿಕೆ ಮರದಷ್ಟು ಸಪೂರ ಮತ್ತು ಉದ್ದವಿಲ್ಲದ ಸಸ್ಯಗಳನ್ನು ಕಂಡು ಇದು ಅದಲ್ಲವೆಂದು ಖಚಿತವಾಯಿತಾದರೂ ಕುತೂಹಲದಿಂದ ಫೋಟೊ ಕ್ಲಿಕ್ಕಿಸಿದೆ. ತೋಟದ ತುಂಬಾ ಸಾಲಾಗಿ ಬೆಳೆದು ನಿಂತು ಆಹ್ಲಾದ ನೀಡುತ್ತಿದ್ದ ಇವುಗಳ ಕುರಿತು ಗೂಗಲ್‌ನಲ್ಲಿ ಜಾಲಾಡಿದಾಗ ಇವು 'ರಾಯ್ಸ್ಟೋನಿಯಾ ರೆಜಿಯಾ' ವೈಜ್ಞಾನಿಕ ಹೆಸರಿನ ಭವ್ಯ ನೋಟದ 'ರಾಯಲ್ ಪಾಮ್ ಮರ'ಗಳೆಂದು ತಿಳಿಯಿತು. ಕೆರಿಬಿಯನ್, ಫ್ಲೋರಿಡಾ, ಮೆಕ್ಸಿಕೋ, ಅಮೆರಿಕದ ಸ್ಥಳೀಯ ತಾಳೆಮರದ ತಳಿಯಾಗಿದೆ. ಉಷ್ಣವಲಯದ ಮತ್ತು ಉಪೋಷ್ಣವಲಯದ ಪ್ರದೇಶಗಳಲ್ಲಿ ಇವನ್ನು ಆಲಂಕಾರಿಕ ಮರವಾಗಿ ಉದ್ಯಾನವನಗಳಲ್ಲಿ ಮತ್ತು ರಸ್ತೆಗಳ ಪಕ್ಕದಲ್ಲಿ ನೆಡಲಾಗುತ್ತದೆ. ಸುಮಾರು 20 ಮೀ. ಎತ್ತರಕ್ಕೆ ಬೆಳೆಯಬಲ್ಲುದು. 1ರಿಂದ 1.5 ಅಡಿ ವ್ಯಾಸದ ನಯವಾದ, ಬೂದು ಬಿಳಿ ಕಾಂಡದಿಂದ ಕೂಡಿರುತ್ತದೆ. ಗರಿಯಂತಹ ಎಲೆಗಳು 3–4 ಮೀ. ಉದ್ದವಿದ್ದು, ಭಾರದಿಂದ ಕೆಳ ಬಾಗಿರುತ್ತವೆ.

ಥೇಟ್ ಅಡಿಕೆ ಕಾಯಿಗಳನ್ನು ಹೋಲುವ ಇದರ ಹಣ್ಣುಗಳು ಸುಮಾರು 1–2 ಸೆಂ.ಮೀ. ವ್ಯಾಸದ ಗಟ್ಟಿ ಒಳ ಬೀಜಗಳನ್ನು ಹೊಂದಿರುತ್ತವೆ. ಅವು ಹಣ್ಣಾಗುತ್ತಿದ್ದಂತೆ ಹಸಿರು ಬಣ್ಣದಿಂದ ಕೆಂಪು ಮತ್ತು ನಂತರ ನೇರಳೆ ಕಪ್ಪು ಬಣ್ಣಕ್ಕೆ ತಿರುಗುತ್ತವೆ. ರುಚಿಯಿರದಿರುವುದರಿಂದ ಸಾಮಾನ್ಯವಾಗಿ ಇವು ಮನುಷ್ಯರಿಗೆ ಆಹಾರವಾಗಿ ಬಳಕೆಯಲ್ಲಿಲ್ಲ. ಆದರೆ ಹಲವಾರು ಪಕ್ಷಿಗಳು ಮತ್ತು ಜಾನುವಾರುಗಳು ಆಹಾರವಾಗಿ ಸೇವಿಸುತ್ತವೆ. ಬೀಜದ ಹೊರ ಕವಚ ನಾರುಸಹಿತವಾಗಿದ್ದು, ಪ್ರೊಟೀನ್ ಮತ್ತು ಕೊಬ್ಬಿನಂಶ ಹೊಂದಿರುತ್ತದೆ. ಬೀಜ ಅಥವಾ ಹಣ್ಣುಗಳನ್ನು ಕುಟ್ಟಿದ ಬಳಿಕ ಕೃಷಿಗೆ ಗೊಬ್ಬರವಾಗಿ ಬಳಸಬಹುದು. ಈ ವೃಕ್ಷಗಳು ಗಾಳಿಯ ಹರಿವನ್ನು ವೃದ್ಧಿಸಲು ಸಹಕಾರಿಯಾಗಿರುವುದರಿಂದ ಉದ್ಯಾನವನಗಳಿಗೆ ಹೇಳಿ ಮಾಡಿಸಿದಂತಿವೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ

## ಗ್ರಾಮೀಣ ಸೊಗಡಿನ ಉಟ್ಲು ಪರಿಷೆ





ಚಿಕ್ಕಬಳ್ಳಾಪುರದ ಗುಡಿಬಂಡಿಯ ಚೆಂಡೂರು ಗ್ರಾಮದ ಹೊರಗಿನ ಆಂಜನೇಯ ದೇವಸ್ಥಾನದ ಮುಂದಿನ ಬಯಲಲ್ಲಿ ಕಂಡ ಪರಿಷೆಯ ಚಿತ್ರಣವಿದು. ಜನಪದ ಸೊಗಡಿನ ಮೂಲಬೇರು ಗ್ರಾಮೀಣ ಪ್ರದೇಶ. ಪರಿಷೆಯಲ್ಲಿ ಒಂದೆಡೆ ತಾರಕಕ್ಕೆ ಏರಿದ ರಾಮ ಭಜನೆ ಕಂಡರೆ, ಮತ್ತೊಂದೆಡೆ ಎತ್ತಿನ ಗಾಡಿಯಲ್ಲಿ ಮಲಗಿಸಿದ ಸುಮಾರು 60 ಅಡಿ ಉದ್ದದ ಮರದ ಕಂಬ ಆಕರ್ಷಿಸುತ್ತಿತ್ತು. ಜೊತೆಗೆ ನೆತ್ತಿಯ ಮೇಲೊಂದು ತಿರುಗಣೆಗಾಗಿ ಕಬ್ಬಿಣದ ಗೂಟ, ಕಂಬದ ಮೇಲೆ ತಿರುಗುವ ಸಾಧನ, ಪರಸ್ಪರ ಅಭಿಮುಖವಾಗಿ ಕುಳಿತು ತಿರುಗಿಸಲು ಅನುವಾಗುವಂತೆ ಅದರಲ್ಲಿದ್ದ ಎರಡು ಮಣೆಗಳು ಪರಿಷೆಯಲ್ಲಿ ರಾರಾಜಿಸುತ್ತಿದ್ದವು. ಒಟ್ಟಾರೆಯ ಈ ಇಡೀ ಚಿತ್ರಣವನ್ನು 'ಉಟ್ಲು' ಎನ್ನಲಾಗುತ್ತದೆ.

ತಿರುಗಣೆಯ ಅಂಚಿಗೆ ನಾಲ್ಕು ಸುತ್ತಿಗೆ ನಾಲ್ಕು ಹಗ್ಗಗಳಿಂದ ನೀರು, ಹಾಲು, ಮೊಸರಿನ ಮಡಿಕೆ ಮತ್ತು ತೆಂಗಿನಕಾಯಿಯನ್ನು ಕಟ್ಟಿರುತ್ತಾರೆ. ತಿರುಗಿಸುವಾಗ ಅಲ್ಲಿ ನೆರೆದಿರುವ ಜನರು ಇವುಗಳನ್ನು ಒಡೆದು ಗೆದ್ದ ಇಬ್ಬರನ್ನು ಮುಂದಿನ ವರ್ಷದ ತಿರುಗಣೆ ತಿರುಗಿಸಲು ಆಯ್ಕೆ ಮಾಡಲಾಗುತ್ತದೆ. ಉಟ್ಲು ಹೊರಡುವ ಮುಂಚೆ ಗ್ರಾಮದ ದೇವಸ್ಥಾನದಲ್ಲಿ ಸಾಲಂಕೃತ ಎತ್ತುಗಳಿಗೆ ಮತ್ತು ಕಂಬಕ್ಕೆ ಸಾಂಪ್ರದಾಯಿಕ ಪೂಜೆ ನೆರವೇರುತ್ತದೆ. ತಂಬಿಟ್ಟಿನ ದೀಪ ಸಹಿತ ಕಳಸ ಹೊತ್ತ ಮಹಿಳೆಯರು ಮೆರವಣಿಗೆಯ ಮೂಲಕ ಉಟ್ಲು ಪರಿಷೆಯ ಜಾಗಕ್ಕೆ ಬಂದು ಎಲ್ಲರೂ ಸೇರುತ್ತಾರೆ.

–ಮೈ. ಸತೀಶ ಕುಮಾರ, ಕೋಲಾರ